# ಕಾಗೆ ಕಾಗೆ ಕವ್ವಾ...

ಅರುಣಾ ಕೆ.ಆರ್.

ಕಲೆ: ಬಿ.ಜಿ. ಗುಜ್ಜಾರಪ್ಪ

ಈ ಜಗತ್ತಿನಲ್ಲಿ ಹೊಗಳಿಕೆಗೆ ಮರುಳಾಗದವರು ಯಾರಿದ್ದಾರೆ ಹೇಳಿ? ಹಿಂದಿನ ಕಾಲದಲ್ಲಿ ರಾಜ–ಮಹಾರಾಜರನ್ನು ಓಲೈಸಲೆಂದೇ ಹೊಗಳುಭಟರು ಇರುತ್ತಿದ್ದರಂತೆ! ಈಗಲೂ ಅಂತಹ ಹಿಂಬಾಲಕರು ಇದ್ದಾರೆ. ಇರಲಿ ಬಿಡಿ, ನಾವೀಗ ಹಾಗೇ ಪ್ರಾಣಿ–ಪಕ್ಷಿಗಳ ಲೋಕಕ್ಕೆ ಹೋಗೋಣ. ಬಾಲ್ಯದಲ್ಲಿ ಶಾಲೆಯ ಕನ್ನಡ ಪಠ್ಯದಲ್ಲಿ 'ಕಾಗೆಯೊಂದು ಹಾರಿ ಬಂದು / ಮರದ ಮೇಲೆ ಕುಳಿತುಕೊಂಡು / ಬಾಯಲ್ಲಿದ್ದ ಮಾಂಸವನ್ನು ತಿನ್ನತೊಡಗಿತು....' ಎಂಬ ಸಿ.ಫ. ಕಟ್ಟೀಮನಿಯವರು ಬರೆದ ಪದ್ಯದಲ್ಲಿ ಕೊನೆಗೆ ಠಕ್ಕ ನರಿಯ ಹೊಗಳಿಕೆಯ ಮಾತಿಗೆ ಮರುಳಾಗಿ ಕಾಗೆ ತನ್ನ ಬಾಯಲ್ಲಿದ್ದ ಮಾಂಸವನ್ನು ಬಿಟ್ಟು 'ಕಾ...ಕಾ...' ಎಂದು ಕೂಗಿದಾಗ ಕೆಳಗೆ ಬಿದ್ದ ಮಾಂಸವನ್ನು ನರಿ ಕಚ್ಚಿಕೊಂಡು ಓಡಿಹೋಗುತ್ತಿದ್ದುದನ್ನು ಮೇಷ್ಟ್ರು ಎಷ್ಟು ಚೆಂದಾಗಿ ಹೇಳುತ್ತಿದ್ದರು! ಮೇಷ್ಟ್ರು ರಾಗವಾಗಿ ಹೇಳುತ್ತಿದ್ದ ಪದ್ಯವನ್ನು ಬಾಯಿಬಿಟ್ಟು ಕೇಳುತ್ತಿದ್ದ ಒಂದಿಬ್ಬರು ಹುಡುಗಿಯರಿಗೆ "ಕಾಗೆ ಬಾಯಿಬಿಟ್ಟಂತೆ ನೀವೂ ಬಾಯಿ ಬಿಟ್ಟರೆ ಜೊಲ್ಲು ಕೆಳಗೆ ಬೀಳುತ್ತೆ" ಅಂತ ಹಾಸ್ಯ ಮಾಡಿದೊಡನೆ ನಾವೆಲ್ಲಾ "ಗೊಳ್" ಎಂದು ನಗುತ್ತಿದ್ದೆವು. ಆ ಕಾಗೆಯ ಪೆದ್ದುತನಕ್ಕೆ ಮರುಗುತ್ತಾ, ನರಿಯ ಜಾಣತನವನ್ನು ಮೆಚ್ಚುತ್ತಾ, ಒಂದೆಡೆ ನರಿ ಆ ರೀತಿ ಕಾಗೆಗೆ ಮೋಸ ಮಾಡಬಾರದಿತ್ತು ಎಂದು ಯೋಚಿಸುತ್ತಾ, ಆ ಪದ್ಯವನ್ನು ಉರುಹೊಡೆಯುತ್ತಿದ್ದೆವು. ಕಲ್ಲುಗಳನ್ನು ಆರಿಸಿ ತಂದು ಹಾಕಿ ಹೂಜಿಯ ತಳದಲ್ಲಿದ್ದ ನೀರು ಮೇಲೆ ಬಂದಾಗ ಅದನ್ನು ಕುಡಿದು ದಾಹ ತೀರಿಸಿಕೊಂಡ ಕಾಗೆ ಇಷ್ಟು ಪೆದ್ದು ಆಗಿದ್ದು ಹೇಗೆ ಎಂದು ಆಶ್ಚರ್ಯ ಪಡುತ್ತಿದ್ದೆವು. ಕಾಗೆ–ನರಿಯ ಪದ್ಯದಿಂದ ಸುಳ್ಳು ಸುಳ್ಳೇ ಹೊಗಳುವವರ ಬಗ್ಗೆ ಜಾಗ್ರತೆಯಾಗಿರಬೇಕು ಎಂಬ ವಿಚಾರ ಆಗೆಲ್ಲಾ ನಮ್ಮ ಬಡ್ಡು ತಲೆಗೆ ಹೊಳೆಯುತ್ತಿರಲಿಲ್ಲ ಬಿಡಿ. ಈಗಲಾದರೆ "ಮುಖಸ್ತುತಿ ಎನ್ನುವುದು ಅತ್ತರಿನ ಹಾಗೆ. ಮೂಸಲಿಕ್ಕೇ ಹೊರತು ನುಂಗಲಿಕ್ಕಲ್ಲ" ಎಂಬ ಜಪಾನೀ ನುಡಿಗಟ್ಟು ನೆನಪಾಗುತ್ತದೆ.

ದುರ್ಬಲರ ಮೇಲೆ ಪ್ರಬಲರ ಆಕ್ರಮಣವನ್ನು ಸಂಕೇತಿಸುವ ಕಾಗಕ್ಕ ಮತ್ತು ಗುಬ್ಬಕ್ಕನ ಕಥೆಯನ್ನಂತೂ ನಾವು ಬಾಲ್ಯದಲ್ಲೇ ಹಲವಾರು ಬಾರಿ ಕೇಳಿ ಬೆಳೆದಿದ್ದೇವೆ. ಮಳೆಯಲ್ಲಿ ನೆಂದ ಕಾಗೆಯನ್ನು ಮರುಕದಿಂದ ಗುಬ್ಬಿ ತನ್ನ ಗೂಡೊಳಗೆ ಕರೆದು ಉಪಚರಿಸುವುದು, ಕಾಗೆ ಗುಬ್ಬಿಯ ಮರಿಗಳನ್ನು ತಿನ್ನಲು ಆಸೆ ಪಡುವುದು, ರಾತ್ರಿ ಮಲಗಿದ್ದಾಗ ತೊಟ್ಟಿಲಲ್ಲಿದ್ದ ಒಂದೊಂದೇ ಗುಬ್ಬಿ